"ನೋ ಡೇಂಜರ್! ಅಷ್ಟೇ ಅರ್ಥ. ಅದನ್ನೇಕೆ ಗುರುತಿಸಿದ್ದ ಗೊತ್ತೆ? ಆಯಾ ದಿನಗಳ ಪತ್ರಿಕೆಗಳಲ್ಲಿ ಕೇಸಿನ ತನಿಖೆಯ ವರದಿಗಳು ಪ್ರಕಟವಾಗಿದ್ದವು. ಮುಂದೊಮ್ಮೆ ಪುನಃ ಓದಿಗೆ ಗುರುತಾಗಿ ಅದನ್ನ ಬರೆದಿದ್ದ. ಮೋಹಿತನ ಲ್ಯಾಪ್ ಟಾಪ್ ನಲ್ಲೂ ಗೂಗಲ್‌ನ ಹಿಸ್ಟರಿ ನೋಡಿದಾಗ ಆತ ಸದಾ ಗುಜರಾತಿ ಪತ್ರಿಕೆಗಳಲ್ಲಿ ಕಣ್ಣಾಡಿಸುತ್ತಿದ್ದುದು ಕಂಡಿತು. ಮೇ ಮೂರರಂದು, ಅಂದ್ರೆ ಕಳವು ನಡೆದು, ನಾಲ್ಕು ತಿಂಗಳ ನಂತ್ರ, ಕಾಂತಿಲಾಲ್ ಸುಳಿವು ನೀಡಿದವರಿಗೆ ಬಹುಮಾನ ಘೋಷಿಸಿದ್ದನ್ನು, ಡೈರಿಯಲ್ಲಿ ದಾಖಲಿಸಿದ್ದ. ಹತ್ತರಂದು ಕೆಲವು ಮರದ ಚಿತ್ರಗಳು, ಬಾವಲಿ ಎಂದೂ ಬರೆದಿದ್ದ. ಆತನಿಗೆ ಬಾವಲಿಗಳ ಬಗ್ಗೆ ಆಸಕ್ತಿಯಿರೋದು ಪುಸ್ತಕಗಳ ಸಂಗ್ರಹದಿಂದ ಗೊತ್ತಾಯ್ತು. ಆದರೆ ಅದನ್ನೇಕೆ ಇಲ್ಲಿ ಬರೆದ? ತುಸು ಯೋಚಿಸಿದಾಗ, ಹೊಳೆಯಿತು! ಅಷ್ಟರಲ್ಲಿ ಆತ ಕಾಡಿನಲ್ಲಿ ವಜ್ರಗಳನ್ನು ಅಡಗಿಸಿಟ್ಟಿರಬೇಕು! ಆ ಚಿತ್ರ ವಜ್ರ ಅಡಗಿಸಿಟ್ಟಿದ್ದ ತಾಣದ್ದು! ಆ ಮರದಲ್ಲಿ ಬಹಳಷ್ಟು ಬಾವಲಿಗಳು ವಾಸವಾಗಿರಲೇಬೇಕು!! ಆತ ಆಗಾಗ್ಗೆ ಎದುರಿನ ಕಾಡಿನಲ್ಲಿ ಮಾಯವಾಗುತ್ತಿದ್ದ ಅಂತ ವರ್ಷಿಣಿ ಹೇಳ್ತಿದ್ದಳಲ್ಲ. ಅಲ್ಲಿಗೆ ಅವನು ಹೋಗುತ್ತಿದ್ದುದು ಎರಡು ಉದ್ದೇಶಕ್ಕೆ. ಒಂದು, ಅವಿತುಕೊಳ್ಳಲಿಕ್ಕೆ, ಕಾಲಿಯಾ ಮೇ ತಿಂಗಳಲ್ಲಿ ಬಂದ ನಂತರ ಮೋಹಿತ ಈ ಅಭ್ಯಾಸ ಆರಂಭಿಸಿದ, ಇನ್ನೊಂದು ವಜ್ರ ಅಡಗಿಸಿಟ್ಟಿದ್ದು ಸುರಕ್ಷಿತವಾಗಿದೆ ಎಂದು ಖಚಿತಪಡಿಸಿಕೊಳ್ಳಲು! ಕಾಡಿನಲ್ಲಿ ನಾನು ಇರುಳು ಹೋಗಿ ಕಂಡಾಗ, ಬಾವಲಿಗಳಿದ್ದ ದೊಡ್ಡ ವೃಕ್ಷವೊಂದನ್ನು ಕಂಡೆ. ಅದು ಡೈರಿಯಲ್ಲಿದ್ದ ಚಿತ್ರವನ್ನು ಹೋಲುತ್ತಿತ್ತು. ನನಗಲ್ಲಿ ವಜ್ರಗಳು ಸಿಕ್ಕಿದವು!"

**'ಸೂರತ್‌ನಲ್ಲಿ ವ್ಯಕ್ತಿಯೊಬ್ಬನ ಹತ್ಯೆಯಾಗಿದೆ, ಅದಕ್ಕೂ, ವಜ್ರಗಳ ನಾಪತ್ತೆಗೂ ಸಂಬಂಧವಿರಬೇಕೆಂದು ವರದಿಯಾಗಿತ್ತು! ಅಲ್ಲಿದ್ದ ಫೋಟೊ ಆರ್ಮುಗಂನದ್ದು!! ಆರ್ಮುಗಂನ ಕೊಂದ ಕಾಲಿಯಾ, ವಜ್ರ ಸಿಗದಿದ್ದಾಗ ಇಲ್ಲಿಗೆ ಬಂದು, ಮೋಹಿತನಿಗೆ ಕರೆ ಮಾಡಿದ್ದಾನೆ.'**

"ಆದ್ರೆ ಕಾಲಿಯಾನಿಗೆ ಮೋಹಿತ ಇಲ್ಲಿರುವ ವಿಷ್ಯ ಹೇಗೆ ಗೊತ್ತಾಯ್ತು?"

"ಅದ್ಕೆ ಸಹಾಯ ಮಾಡ್ದೋನು ಆತನ ಆಪ್ತ ಮಿತ್ರ ಸೋಮಯ್ಯ."

ಹಾಗೆ ಹೇಳ್ದಾಗ ಸೋಮಯ್ಯ ಬಿಳಿಚಿಕೊಂಡ.

"ನಾನು ಸ್ಥಳೀಯ ಪೇಪರ್ ಏಜೆಂಟನಲ್ಲಿ ವಿಚಾರಿಸಿದಾಗ, ಆತ ಇಬ್ಬರು ಗುಜರಾತಿ ಭಾಷೆಯ ಪತ್ರಿಕೆ ತರಿಸೋ ವಿಚಾರ ಹೇಳ್ದ. ಒಬ್ಬನು ಮೋಹಿತ್, ಇನ್ನೊಬ್ಬನು ಸೋಮಯ್ಯ! ಆದ್ರೆ ಮೋಹಿತನ ಕೊಠಡಿಯಲ್ಲಿರುವಾಗ ಸೋಮಯ್ಯ ತನಗೆ ಗುಜರಾತಿ ಗೊತ್ತಿಲ್ಲ ಅಂತ ಹೇಳಿದ್ದ. ಯಾಕೆ? ನಾನು ಆತನ ಚರವಾಣಿಯ ದಾಖಲೆ ಪರಿಶೀಲನೆ ನಡೆಸ್ದಾಗ ಒಂದು ಆಸಕ್ತಿಕರ ವಿಚಾರ ಗಮನ ಸೆಳೆಯಿತು. ಮೇ ಮೂರರ ಪತ್ರಿಕೆಯಲ್ಲಿ ವಜ್ರ ಲಪಟಾಯಿಸಿದ ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡಿದವರಿಗೆ ಹತ್ತು ಲಕ್ಷ ಬಹುಮಾನ ಘೋಷಿಸಲಾಗಿತ್ತು. ಮಾಹಿತಿ ನೀಡಲು ಚರವಾಣಿ ಸಂಖ್ಯೆಯನ್ನೂ ಹಾಕಿದ್ರು. ಸೋಮಯ್ಯನಿಗೆ ಮೋಹಿತನೇ ವಿಕ್ಟರ್ ಅಂತ ಗೊತ್ತಾಗಿತ್ತು. ಹತ್ತು ಲಕ್ಷದ ಆಸೆಯಿಂದ ಆ ವರದಿ ಪ್ರಕಟಗೊಂಡ ಮರುದಿನ ಆತ ಆ ಸಂಖ್ಯೆಗೆ